


# ಬದುಕನ್ನು ಮೂರಾಬಟ್ಟೆ ಮಾಡಿದ ಪ್ರವಾಹ

ಕರ್ನಾಟಕದ ಪಾಲಿಗೆ 2019 ವಿಲಕ್ಷಣ ಸನ್ನಿವೇಶವನ್ನು ಸೃಷ್ಟಿಸಿದಂತಹ ವರ್ಷ. ಮೊದಲ ಆರು ತಿಂಗಳ ಅವಧಿಯಲ್ಲಿ ಬರದ ತೀವ್ರ ಹೊಡೆತಕ್ಕೆ ಸಿಕ್ಕಿ ನಲುಗಿದ ಜನರ ಬದುಕನ್ನು, ವರ್ಷದ ಉತ್ತರಾರ್ಧದಲ್ಲಿ ಹುಚ್ಚುಮಳೆ ಮತ್ತು ಪ್ರವಾಹ ಸಂಪೂರ್ಣವಾಗಿ ಮೂರಾಬಟ್ಟೆ ಮಾಡಿಬಿಟ್ಟಿತು. ಆಹಾರ ಧಾನ್ಯಗಳೆಲ್ಲ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದರಿಂದ ಅನ್ನದಾತರೇ ತುತ್ತು ಅನ್ನಕ್ಕಾಗಿ ಕೈಯೊಡ್ಡುವಂತಹ ದಾರುಣ ಸ್ಥಿತಿ ಸೃಷ್ಟಿಯಾಯಿತು. ಲಕ್ಷಾಂತರ ಮಕ್ಕಳು, ಶಾಲಾ ಕಟ್ಟಡವಿಲ್ಲದೆ, ಓದಲು ಪುಸ್ತಕಗಳಿಲ್ಲದೆ ನಿರಾಶ್ರಿತರ ಶಿಬಿರಗಳಲ್ಲೇ ದಿನಗಳನ್ನು ದೂಡುವಂತಾಯಿತು. ಮದುವೆಯಾಗಬೇಕಿದ್ದ ಎಷ್ಟೋ ಜೋಡಿಗಳ ಕನಸುಗಳು ಹೊಳೆನೀರಿನಲ್ಲಿ ತೇಲಿಹೋದವು.

ರಾಜ್ಯದ 22 ಜಿಲ್ಲೆಗಳಲ್ಲಿ ಮಹಾಮಳೆ ದೊಡ್ಡ ಅನಾಹುತವನ್ನೇ ಸೃಷ್ಟಿಸಿತು. 2000 ಹಳ್ಳಿಗಳ ಜನ ಪ್ರವಾಹದ 'ಬಿಸಿ'ಯನ್ನು ಅನುಭವಿಸಿದರು. 56 ಸಾವಿರಕ್ಕೂ ಅಧಿಕ ಮನೆಗಳು ಧರೆಗೆ ಉರುಳಿ 7 ಲಕ್ಷ ಜನ ಬೀದಿಪಾಲಾದರು. ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಘಟಕದ ವರದಿ ಪ್ರಕಾರ, ಪ್ರವಾಹದಲ್ಲಿ ಒಟ್ಟಾರೆ 61 ಜನ ಪ್ರಾಣ ಕಳೆದುಕೊಂಡರು. 6.9 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದು ನಿಂತಿದ್ದ ಬೆಳೆ ಕೊಚ್ಚಿಹೋಯಿತು. ಬೆಳಗಾವಿ, ಬಾಗಲಕೋಟೆ, ವಿಜಯಪುರ, ರಾಯಚೂರು, ಯಾದಗಿರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಳೆ ಬಹುದೊಡ್ಡ ಅನಾಹುತವನ್ನು ಉಂಟುಮಾಡಿತು. ಮನೆ ಕಳೆದುಕೊಂಡವರಿಗೆ ಆಶ್ರಯ ನೀಡಲು 1,160 ನಿರಾಶ್ರಿತರ ಶಿಬಿರಗಳನ್ನು ತೆರೆಯಲಾಗಿತ್ತು. ಒಂದೆಡೆ ಮಹಾರಾಷ್ಟ್ರದ ಅಣೆಕಟ್ಟುಗಳಿಂದ ಹರಿದ ನೀರು ಸೃಷ್ಟಿಸಿದ ಪ್ರವಾಹ, ಇನ್ನೊಂದೆಡೆ ಕುಂಭದ್ರೋಣ ಮಳೆ – ಅಡಕತ್ತರಿಯಲ್ಲಿ ಸಿಕ್ಕಂತಾಗಿತ್ತು ಜನರ ಸ್ಥಿತಿ.

ಕರ್ನಾಟಕ ಮಾತ್ರವಲ್ಲದೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಗೋವಾ, ಗುಜರಾತ್, ಮಧ್ಯಪ್ರದೇಶ, ಒಡಿಶಾ, ಬಿಹಾರ, ಆಸ್ಸಾಂ ರಾಜ್ಯಗಳು ಸಹ ಪ್ರವಾಹದ ಹೊಡೆತಕ್ಕೆ ಸಿಲುಕಿ ನಲುಗಿದವು. ದೇಶದಲ್ಲಿ ವಿವಿಧ ಕಡೆಗಳಲ್ಲಿ ಪ್ರವಾಹ ಸೃಷ್ಟಿಸಿದ ದುರಂತದ ಘಟನೆಗಳಲ್ಲಿ ಒಟ್ಟಾರೆ 200 ಜನ ಪ್ರಾಣ ಕಳೆದುಕೊಂಡರು. ಕರಾವಳಿಯುದ್ದಕ್ಕೂ ಹರಡಿದ ಪುಟ್ಟ ರಾಜ್ಯ ಕೇರಳವನ್ನು ಕಳೆದ ವರ್ಷದಂತೆ ಈ ವರ್ಷವೂ ಪ್ರವಾಹದ ಸಂಕಷ್ಟ ಬೆಂಬಿಡದಂತೆ ಕಾಡಿತು. ಆ ರಾಜ್ಯದ ಒಂಬತ್ತು ಜಿಲ್ಲೆಗಳ ತುಂಬಾ ನೀರೇ ನೀರು. ಮಳೆ ಸೃಷ್ಟಿಸಿದ ದುರಂತದಲ್ಲಿ ಆ ರಾಜ್ಯದ 121 ಜನ ಸಾವನ್ನಪ್ಪಿದರು. ಎರಡು ಲಕ್ಷ ಜನ ನಿರಾಶ್ರಿತರಾದರು. ಪ್ರವಾಹಪೀಡಿತ ಹಳ್ಳಿಗಳಲ್ಲಿ ಈಗ ಮತ್ತೆ ಹೊಸ ಬದುಕನ್ನು ಕಟ್ಟಿಕೊಳ್ಳಲು ಅಲ್ಲಿನ ಭಗ್ನಾವಶೇಷಗಳಲ್ಲಿ ಜೀವನ್ಮುಖಿ ಪಯಣ ಶುರುವಾಗಿದೆ.